ನೆರಳಲ್ಲಿ ಕುಕ್ಕೆಗೆ ಕಡ್ಡಿ ಸೀಳಿ ಕೊಡೋದು, ಬಾರೆ ಸುತ್ತಿ ಕಡ್ಡಿ ತರೋದು, ಕುಕ್ಕೆ ಹೆಣೆಯೋದು – ಹೀಗೆ ಅಪ್ಪನೊಂದಿಗೆ ದುಡಿದು ಬದುಕುವ ಕ್ರಿಯಾಶೀಲ ಯಂತ್ರಶಕ್ತಿಯಾಗಿದ್ದ.

ಈ ಗಂಗಜ್ಜ ಕುಕ್ಕೆ ಹೆಣೀತಿದ್ರೆ ಊರ ಹೆಂಗಸರು ಬಾವಿ ನೀರಿಗೆ ಬರೋರಲ್ಲ, ಅದ್ರಲ್ಲೂ ಈ ಕೆಳಗಿನ ಮನೆ ಹೆಣ್ಮಕ್ಳು, ಮೇಗಳ ಮನೆ ಹೆಣ್ಮಕ್ಳು ಕುಕ್ಕೆ ಹೆಣಿಗೆ ನೋಡಿ ಈ ಕುಕ್ಕೆ ನನಗೆ ಬೇಕು, ಆ ಕುಕ್ಕೆ ನನಗೆ ಬೇಕು ಅಂತ ಒಬ್ಬರ ಮೇಲೊಬ್ಬರು ಬಿದ್ದು ವ್ಯಾಪಾರ ಮಾಡಾರು. ಅದ್ರಲ್ಲೂ, ಬೇಕಾದ್ರೆ ಐದು ರೂಪಾಯಿ ಜಾಸ್ತಿನೇ ಆದ್ರೂ ಆಗ್ಲಿ ನಾ ತಗತಿನಿ ಅನ್ನರು. ಈ ಅಜ್ಜ ಸೀಳಿದ ಕಡ್ಡಿನ ಒಂದ್ ಲೈನು ವಳಿಕೆ, ಒಂದ್ ಲೈನು ಈಚೆಕೆ ಕೊಟ್ಟು ಅನುಭವಿಸಿ ಉಲ್ಟಾ ಸೀದ ಹೆಣೆತಿದ್ರೆ; ಬೆಳ್ಳಗೆ ಕರ್ರಗಿನ ಆ ಕುಕ್ಕೆ ಅದ್ಭುತವಾದ ಚಿತ್ತಾರದಂತೆ ಕಾಣೋದು. ಅದರ ಕಲಾ ಕೌಶಲ್ಯವನ್ನು ಕಣ್ ತುಂಬಿಕೊಂಡ ಊರ ಹೆಣ್ಮಕ್ಳು ನನಗೆ ಬೇಕು, ನನಗೆ ಬೇಕು ಅಂತ ಮುಗಿ ಬೀಳ್ತಿದ್ರು. ಹೆಣೆದ ಕುಕ್ಕೆ ಕೈಗೆ ತಗಂಡು 'ಅಕ ಇದ್ನೋಡು ಎಷ್ಟು ಚನ್ನಾಗೈತೆ, ಅದ್ನೋಡು ಅದೆಷ್ಟು ಚನ್ನಾಗೈತೆ' ಎಂದು ತುಂಬಿದ ದೃಷ್ಟಿಬೀರಿ ಮುಂದೆ ಬರುತ್ತಿದ್ದರು.

ಅತ್ತಿಂದ ಕಂಕ್ಲಲ್ಲಿ ಬಿಂದಿಗೆ ಇರಿಕಂಡ್ ಬಂದ ಬುಡ್ಡಯ್ಯನ ಸೊಸೆ ಊರ ಹೆಂಗಸರ ಕೈಯಾಗಿನ ಕುಕ್ಕೆ ನೋಡಿ 'ತಾನೂ ಕುಕ್ಕೆ ತಗಬೇಕು' ಎಂಬ ಹಂಬಲ ಇಟ್ಟುಕೊಂಡು ಅವರತ್ತ ಹೆಜ್ಜೆ ಹಾಕಿದಳು.

ಕಂಕ್ಲಾಗಿನ ಬಿಂದಿಗೆನ ಬಾವಿ ಕಟ್ಟೆಮೇಲೆ ಇಟ್ಟು ಕೆಳಗಲ ಮನೆ, ಮೇಗಳ ಮನೆ ಹೆಂಗಸರನ್ನ ಬಳಸಿ ಅತ್ತ ಮರೆಯಾದಳು. ಈ ಮೊದಲೇ ಬಂದು ಕುಳಿತಿದ್ದ ತಾಮ್ರದ ಬಿಂದಿಗೆಗಳು ಹೊಸದಾಗಿ ಬಾವಿ ಕಟ್ಟೆಯ ಮೇಲೆ ಬಂದು ಕುಳಿತ ಪ್ಲಾಸ್ಟಿಕ್ ಬಿಂದಿಗೆಯನ್ನು ಮಾತನಾಡಿಸಿದವು. ಮೇಗಳ ಮನೆಯ ತಾಮ್ರದ ಬಿಂದಿಗೆ: 'ಬಾ ತಾಯಿ ಇತ್ತ ನೀನು' ಎಂದು ಪ್ಲಾಸ್ಟಿಕ್ ಬಿಂದಿಗೆಯನ್ನು ಪಕ್ಕಕ್ಕೆ ಸೆಳೆದುಕೊಳ್ಳುತ್ತಾ ತಟ್ಟಿ ಮುಟ್ಟಿ ಮಾತಾಡಿಸಿ ಹೇಳಿತು: 'ನೀನು ಎಲ್ಲರೊಂದಿಗೆ ಪರಿಪೂರ್ಣ ಬೆರೆತು ಒಂದಾಗಬೇಕು' ಎಂದು ತಾಮ್ರದ ಬಿಂದಿಗೆ ಈ ಪ್ಲಾಸ್ಟಿಕ್ ಬಿಂದಿಗೆಯ ಕಿವಿಯಲ್ಲಿ ಪಿಸಿಪಿಸಿ ಗುನುಗಿತು.

ಆ ಮಾತಿಗೆ, ಪ್ಲಾಸ್ಟಿಕ್ ಬಿಂದಿಗೆ 'ಪರಿವರ್ತನೆಯ ಪರಿಪೂರ್ಣತೆ ಎಂದಾದರೆ ಅದು ಚಂದ್ರನ ಸೊಂಟದ ಮೇಲೆ ತುಂಬಿ ತುಳುಕದಂತೆ ಒಮ್ಮೆಯಾದರೂ ಕುಳಿತು ಸಾಗಿದಾಗ ಮಾತ್ರ...' ಎಂದು ಬಿಗುಮಾನದಲ್ಲಿ ಮಾತನಾಡಿತ್ತಾದರೂ, ಸಂಕೋಚವಾಗಿ ನಗು ತಡೆಯಲಾರದೆ ತುಳುಕಿತು.

ನಕ್ಕ ನಗೆಗೆ ಪಿತ್ತ ನೆತ್ತಿಗೇರಿಸಿಕೊಂಡ ಮೇಗಳ ಮನೆ ಆ ತಾಮ್ರದ ಬಿಂದಿಗೆ ಸಿಟ್ಟಿನಿಂದ 'ಅಯ್ಯೋ ಅದೇನು ಕಾಣ್ತೋ ನಂದು ಅಂಗೆ ಹಲ್ಲು ಬಿಡೋಕೆ' ಎಂದು ಕೊಸರಿತು.

ಆ ಬೇಸರದ ಮುಖ ಕಂಡ ಕೆಳಗಲ ಮನೆ ಬಿಂದಿಗೆ 'ಯಾಕೆ? ನೀನು ಸಣ್ಣದನ್ನು ಅಗೆದು ಬೆಟ್ಟಮಾಡ್ತಿಯಾ ಎಲ್ಲರೊಟ್ಟಿಗೆ ನಗ್ತಾ ನಗ್ತಾ ಇರು, ಅವಳು ನಾಕಾರು ಊರು ಬೀದಿ ಸುತ್ತಿದ ಅನುಭವ ಇರುವವಳು. ಅವಳ ಮಾತು ಕೇಳೋಣ. ಎಲ್ಲಾ ಮಾತಿಗೂ ತಪ್ಪು ಹುಡುಕುವುದು ಸರಿ ಕಾಣಲ್ಲ.'

ಗಂಗೆಗೆ ಭೇದ ಇಲ್ಲ
ಅವಳು ನನ್ನೊಳಗೂ
ನಿನ್ನೊಳಗೂ ಇದ್ದಾಳೆ
ಅಂಗೆ ಇವಳೊಳಗೂ ಇದ್ದಾಳೆ

ನಮಗೆಲ್ಲರಿಗೂ ಜೀವಕೊಟ್ಟು ಇಲ್ಲಿಗೆ ಕಳಿಸಿರುವವನ ಕೌಶಲ್ಯ ಅರ್ಥಮಾಡಿಕೊ, ಜಾತಿಯನ್ನಲ್ಲ. ಇನ್ನು ಮುಂದೆ ನಾವೇನು ಪ್ರತ್ಯೇಕವಲ್ಲ, ಎಲ್ಲಾ ಒಂದೆ ಎನ್ನುತ್ತ ಒಂದಕ್ಕೊಂದು ಆಲಂಗಿಸಿಕೊಂಡವು.

'ಅಯ್ಯೋ ಅಕ ಬೇರೆ ಕುಕ್ಕೆ ಇಲ್ವಾ? ಇರೋದು ಎರಡೇನಾ' ಎಂದ ಬುಡ್ಡಯ್ಯನ ಸೊಸೆ ಸುತ್ತ ಕಣ್ಣಾಡಿಸಿದಳು.

'ಅಕ್ಕ ನಿಮ್ಮ ದಮ್ಮಯ್ಯ, ಈ ಸಾರಿ ಕುಕ್ಕೆ ನನಗೆ ಬೇಕು, ಪೇಟೇಲ್ರುಂದ ಈಚಲ ಕುಕ್ಕೇನ ಎತ್ತಿ ಎತ್ತಿ ನನ್ನ ನಡ ಬಿದ್ದೋಗೈತೆ' ಎಂದು ಬಿಡಿಸಿ ಹೇಳುವಾಗ ಚಿತ್ರಕಥೆ ಕಣ್ಣಿಗೆ ಕಟ್ಟುವ ರೀತಿ ಮೋಜೆನಿಸುತ್ತಿತ್ತು. ಅವಳ ಮಾತಿಗೆ ನಗುತ್ತ ನಿಂತ ಆ ಮೇಗಳ ಮನೆ, ಕೆಳಗಲ ಮನೆ ಹೆಂಗಸರ ಗಮನ ಇತ್ತ ಸೆಳೆದ ಬುಡ್ಡಯ್ಯನ ಸೊಸೆ: 'ಬೇಕಾರೆ ನೀವೇ ನೋಡಿ, ಕುಕ್ಕೆ ಇರ್ಕ ಇರ್ಕ ಆಗೋಗಿರೊ ನನ್ನ ಸೊಂಟಾನ' ಎಂದು ಉಟ್ಟ ಬಟ್ಟೆ ವಸಿ ಕೆಳಿಕೆ ಸರಿಸಿ ತೋರಿದಳು. ಆ ಸೊಂಟ ನೋಡಿ ನಗುತ್ತಿದ್ದ ಹೆಂಗಸರು ಬೆಚ್ಚಿದರು.

ಮುಂದುವರಿದ ಬುಡ್ಡಯ್ಯನ ಸೊಸೆ 'ಅಯ್ಯೋ ನಮ್ಮನೇವು ಇನ್ನೆಲ್ಲೂ ಸಿಗಲ್ಲ ಅನ್ನಂಗೆ ಪ್ಯಾಟೆಗೋಗಿ ತಂದವೆ, ಇದ್ಯಾಕೆ ಅಂತ ಕೇಳಿದ್ರೆ, ಬಂದೂಬಸ್ತಾಗೈತೆ ಹತ್ತು ವರ್ಷವಾದರೂ ಕಿತ್ತೋಗಲ್ಲ ಅಂತವೆ. ಒಂದು ಸಾರಿ ನೀರಿಗದ್ದಿ ಮೇಲಕ್ಕೆತ್ತಿದ್ರೆ ಆ ಕುಕ್ಕೆ ಯಣಭಾರ. ಹೊರುವವಳು ನಾನು, ಕಷ್ಟ ಅವರಿಗೇನು ಗೊತ್ತು? ಈ ಎರಡು ರೆಟ್ಟೆನೂ ಬಿದ್ದೋಗವೆ, ಆ ಕುಕ್ಕೆ ಅಂಗೆ ನೀರ್ ಕುಡಿಯುತ್ತೆ. ಇದ್ನೆಲ್ಲ ಮನೆಯವ್ರಿಗೆ ಹೇಳಿ ಹೇಳಿ ನನಗೂ ಸಾಕಾಯ್ತು. ನಾನು ಎಂಥಾ ಹಾಳುಮನೆಗೆ ಸಿಕ್ಕಿಬಿದ್ದೆ ಎಂದು ಹಣೆ ಹಣೆ ಚಚ್ಚಿಕೊಂಡು, ಮನೆ ಬಿಟ್ಟು ಯತ್ತಗಾರ ಹೋಗೇಬಿಡನಾ ಅನ್ಸುತ್ತೆ' ಎಂದು ಬೇಸರಿಸಿದಳು.

ಆ ಹೆಂಗಸರಿಗೆ ಅವಳ ಸೊಂಟ ನೋಡಿದ್ದಲ್ಲದೆ ಅವಳ ಮಾತು ಕೇಳಿ ಕನಿಕರ ಹುಟ್ಟಿ, 'ಬಿಡೆತಾಯಿ, ಅಷ್ಟು ಬೇಸರ ಯಾಕೆ? ನಾವು ಬೇಕಾದರೆ ಇನ್ನೊಂದು ಸಲ ಕುಕ್ಕೆ ತಗಂತಿವಿ' ಎಂದರು. ಆ ಕೆಳಗಲ ಮನೆ ಆವಕ್ಕ 'ಇಷ್ಟೆಲ್ಲ ಕಷ್ಟ ಹೇಳಿದ ಮೇಲೂ ನಾವ್ ಯಂಗೆ ಕುಕ್ಕೆ ತಗಣದು. ಆಯ್ತು ನೀನೇ ತಗಳವ' ಎಂದವಳು ನೊಂದವಳ ಮತ್ತೆ ನೋಯಿಸದೆ ಮನಸು ಮುಟ್ಟಿ ಎಲ್ಲರೂ ಒಟ್ಟಾಗಿ ಬಾವಿಯತ್ತ ನಡೆದು ಅಲ್ಲೇ ಇರಿಸಿದ್ದ ಆ ಬಿಂದಿಗೆಗಳನ್ನು ಕಂಕಳಲ್ಲಿಟ್ಟುಕೊಂಡು ಅತ್ತ ಒಂದಾಗಿ ನಡೆದರು. ಅಲ್ಲಿ ಒಂದಾಗಿದ್ದ ಬಿಂದಿಗೆಗಳು ಅವರವರ ಸೊಂಟ ಏರಿ ಹೋಗುವಾಗ ತುಂಬಿದ ಕೊಡಹೊತ್ತ ವಯ್ಯಾರದ ನಡಿಗೆಯ ನೀರೆಯರ ನೋಡುತ್ತಾ ನಿಂತ ಊರ ಪಡ್ಡೆ ಹುಡುಗರ ಎದೆ ಝಲ್ ಎನ್ನುವಂತಿತ್ತು.

ಕುಕ್ಕೆ ಹೆಣೀತಾ ಕುಂತ ಗಂಗಜ್ಜನಿಗೆ ಗಂಜಿ ನೀರು ಕೊಡಕೆ ಬಂದ ಮಗಳು ಹುಚ್ಚಮ್ಮ, ಅದೇನೋ ಕೊಟ್ಟಿಗೇಲಿ ಧುಪ್ಪ್ ಅನ್ನೋ ಸದ್ದು ಕೇಳಿ ಆ ಕಡೆ ಕಣ್ಣಾಯಿಸಿ, ಕೈಯಲ್ಲಿದ್ದ ಗಂಜಿ ನೀರನ್ನ ತುಂಡು ಗೋಡೆ ಮೇಲೆ ಇರಿಸಿ ಕೂಗಾಡ್ಕಂಡು ಕೊಟ್ಟಿಗೆ ಮನೆಯತ್ತ ದೌಡಾಯಿಸಿದಳು. ಅವಳಿಂದೆ ಗಂಗಜ್ಜ, ಮಲೆಯಮ್ಮನೂ ಎದ್ದು ಓಡಿಹೋದರು. ಗೊಂತಲ್ಲಿ ಗಬ್ಬದ ಹಸು ಇನ್ನೇನು ಜೀವ ಹೋಯಿತೇನೋ ಅನ್ನುವ ಹಾಗೆ ಮೇಲೆ ಕೆಳಗೆ ಕಣ್ಣುಬಿಟ್ಟು ಇವರತ್ತಲೇ ನೋಡಿತು. ಕಣ್ಣುಯ್ಯುತ್ತಾ ನಾಲ್ಕೂ ಕಾಲುಗಳ ಮೇಕ್ಕೆತ್ಕೊಂಡು ವದ್ದಾಡ್ತಿತ್ತು. ಅದರ ಹೊಟ್ಟೆ ಒಳಗಿಂದ ಆಚೆ ಬರಾಕೆ ಕರ ಸಾಹಸ ಪಡುತ್ತಿತ್ತು. ಇದನ್ನ ಹೊರಗೆ ತೆಗೆಯೋಕೆ ಗಂಡ ಹೆಂಡತಿ ಇಬ್ಬರೂ ಹೆಣಗಾಡುತ್ತಿದ್ದರು.

ಊರಲ್ಲಿ ನೂರಾರು ಹೆರಿಗೆ ಮಾಡಿಸಿದ ಮಲೆಯಮ್ಮನ ಈ ಕೈಗೆ, ಕರು ಹೊರಗೆ ತೆಗೆಯೋಕೆ ಕಷ್ಟ ಆಗಿ ದುಃಖದ ಭಾವವೇ ಮೇಲಾಯಿತು. ಇದನ್ನೆಲ್ಲ ನೋಡುತ್ತಿದ್ದ ಮಗಳು ಹುಚ್ಚಮ್ಮ ಗಾಬರಿಯಿಂದ ತಾನು ಒಳಗೊಳಗೆ ಸಣ್ಣಗೆ ನಡುಗುತ್ತ ಅತ್ತಿತ್ತ ಓಡಾಡುತ್ತ ಕಣ್ಣಲ್ಲಿ ನೀರು ತುಂಬಿಕೊಂಡು ಊರ ದೇವತೆ ನೆನೆಯುತ್ತಾ, ಈ ಹಸು ಕರವ ಬದುಕಿಸಿ ಕೊಡು ಅಂತ ಬೇಡಿ ಬೇಡಿ ಸಾಕಾಗಿ ಕಣ್ಣರಳಿಸಿ ಬಯ್ಯುತ್ತಾ, 'ನಿನ್ನ ನಾವ್ ಕೇಳ್ಬೇಕ, ನಿನಗೇನು ಕಣ್ ಕಾಣಲ್ವ? ನಿನ್ನ ಕಣ್ಣಿಗೆ ಯಾರಾದರೂ ಬಂದು ಕಾರೆ ಮುಳ್ ಮುರ್ದಾವ್ರ' ಅನ್ನುತ್ತ ದೇವರನ್ನೇ ಬೈಯುವಷ್ಟು ಮನಸು ವಾಸ್ತವಕ್ಕಿಳಿದಿತ್ತು. ದೇವರು ಎಂದರೆ ಹೆದರುವ ಸಣ್ಣ ಜಾತಿ ಇದಲ್ಲ.

ಅದೇನಾಶ್ಚರ್ಯನೋ ಏನೋ ಈ ಕರ ಬರುವಾಗ ನಾಲ್ಕು ಕಾಲಿನ ಜೊತೆಗೆ ಭುಜದ ಮೇಲೊಂದು ಕಾಲಿಟ್ಟುಕೊಂಡು ಹುಟ್ಟಿ ಬಂತು. ಫಲಕೊಟ್ಟ ಸಮಯ ಹಿಂದಿನ ಘಟನೆಗಳನ್ನೆಲ್ಲಾ ಮರೆಸಿ ಆತ್ಮಶಕ್ತಿ ಬಲಗೊಂಡಿತು. ಈ ಕರ ಸಾಕ್ಷಾತ್ ಬಸವಣ್ಣನ ಅವತಾರವೇ ಅನ್ನಿಸಿ ಯಾರು ಹೇಳಿದರೋ, ಯಾರು ನಂಬಿದರೋ ಕಣ್ಣಿಗೆ ಬಿದ್ದ ಸತ್ಯಸಂಗತಿ ಅಷ್ಟೆ. ಯಾವ ಸಾಕ್ಷಿ ಪುರಾವೆ ಬೇಕಾಗಲಿಲ್ಲ. ಆ ದಿನವೇ ಕಡ್ಡಿ ಹಚ್ಚಿ ಹರಕೆ ಹೊತ್ತು ಬಸವನ ಬಿಟ್ಟರು.

***

ಬೀದಿ ಗುಡಿಸುತ್ತಿದ್ದ ರಾಮಕ್ಕ ಕಸಪರಕೆ ಸರಿ ಮಾಡಿಕೊಳ್ಳಲು ಪಕ್ಕದ ಮರಕ್ಕೆ ಕುಕ್ಕುತ್ತ ಇರುವಾಗ ಯಾರೋ ಕಾಲು ಹಾದಿಯಲ್ಲಿ ಬರುತ್ತಿರುವಂತೆ ಅನ್ನಿಸಿ ಸಂಶಯಗೊಂಡು ಅತ್ತ ನೋಡಿದಳು. ಚೌರದ ವಿವೇಕನನ್ನು ನೋಡಿ 'ಥೂ ಇವನ್ ನೆಲ್ಬಟ್ ಹೊಡಿಯ, ಎದ್ಮೊಗ್ಳಿಗೆ ಈ ಶನಿ ಮುಖ ನೋಡ್ದಂಗಾಯ್ತು. ನೆನ್ನೆ ಈ ಮುಖ ನೋಡಿ ಕರೆವ್ಷ ಕಾಲ್ತುಳಿಸ್ಕಂಡೆ, ಇವತ್ತು ಅದೇನಾಗುತ್ತೊ ಆ ಭಗವಂತನೇ ಬಲ್ಲ' ಅಂದವಳು, ಅಗತ್ಯವಿಲ್ಲದಿದ್ದರೂ ಕಸಪರಕೆ ನೆಲಕ್ಕೆ ಕುಕ್ಕಿ ಕಸ ಗುಡಿಸಲು ಮತ್ತೆ ನೆಲದತ್ತ ಮುಖ ಮಾಡಿದಳು. ಕಂಕ್ಲಲ್ಲಿ ಹತಾರ ಇರಿಕ್ಕಂಡು ದಿನದ ಶ್ರಮದಲ್ಲಿ ಎಂಟಾಣೆ ಉಳಿಸಿಕೊಂಡು ಬದುಕಿದರೆ ಸಾಕು ಎಂದು ತನ್ನೊಳಗೆ ಲೆಕ್ಕ ಹಾಕುತ್ತಾ ಕಿರುದಾರಿಯಲ್ಲಿ ಚೌರದ ವಿವೇಕ ಮುಂದೆ ಸಾಗಿದನು.